ಅಧ್ಯಕ್ಷರು : ನಾನು ಅವರನ್ನು ಟೀಕೆ ಮಾಡುತ್ತಿಲ್ಲ. ಅವರು ನಮ್ಮ ಸಹೋದರ ಸಹೋದರಿಯರು ಇದ್ದಾರೆ. ಅವರ ಸಮಸ್ಯೆಗಳ ಬಗ್ಗೆ ಕೂಡ ನಾವೇ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕಾಗುತ್ತದೆ. ಆದರೆ ಪ್ರತಿ ಸಲ ಶಿಕ್ಷಕರ ಸಮೂಹದಿಂದ ಇದು ಒಳ್ಳೆಯ ಪ್ರವೃತ್ತಿಯಾಗುವುದಿಲ್ಲ ಅಷ್ಟೇ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ : ಮಾನ್ಯ ಅಧ್ಯಕ್ಷರೇ, ತಮ್ಮ ಮಾತನ್ನು ನಾನು ಒಪ್ಪುತ್ತೇನೆ. ಅವರು ಈ ರೀತಿ ಮಾಡಬಾರದು ಎನ್ನುವ ಬಗ್ಗೆ ನನ್ನ ಸಹಮತ ಇದೆ. ಈ ಸಂದರ್ಭದಲ್ಲಿ ಮಕ್ಕಳ ಸ್ಥಿತಿ ಏನಾಗಿದೆ? ಪಾಲಕರ ಸ್ಥಿತಿ ಏನಾಗಿದೆ ಇದು ನಮಗೆ ಚಿಂತನೆಗೆ ಈಡಾಗಿರುವುದು.

ಶ್ರೀ ಕೆ. ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೇ, ನಾವು ಹೇಳುತ್ತಿರುವುದು ಮಾತುಕತೆ ಮಾಡಿ ಎಂದು. ಆದರೆ ಅವರ ಎಲ್ಲಾ ಬೇಡಿಕೆಗಳು ಸರಿಯಾಗಿವೆ ಅವುಗಳೆಲ್ಲವನ್ನೂ ತಾವು ಒಪ್ಪುತ್ತೀರಿ ಎಂಬ ವಿಶ್ವಾಸ ನನಗೂ ಇಲ್ಲ. ಆದರೆ ಮಾತುಕತೆ ಮಾಡಿ ಎಷ್ಟಾದರೆ ಅಷ್ಟು ಮುಗಿಸಿ.

ಶ್ರೀ ಎಂ.ಪಿ. ಪ್ರಕಾಶ್ : ಮಾತುಕತೆ ಮಾಡುವುದಕ್ಕೆ ಸರ್ಕಾರ ಯಾವಾಗಲೂ ಕೂಡ ಪ್ರತಿಷ್ಠೆಯ ಪ್ರಶ್ನೆಯನ್ನಾಗಿ ಮಾಡಿಕೊಳ್ಳುವುದಿಲ್ಲ. ಅವರು ಸತ್ಯಾಗ್ರಹ ವಾಪಸ್ಸು ತೆಗೆದುಕೊಳ್ಳಲಿ ಮಾತುಕತೆಗೆ ಒಂದು ಒಳ್ಳೆಯ ವಾತಾವರಣ ಸೃಷ್ಟಿಯಾಗುತ್ತದೆ ಆಗ ಮಾತುಕತೆ ಮಾಡೋಣ.

ಶ್ರೀ ಕೆ.ಎಸ್. ಈಶ್ವರಪ್ಪ : ಇದು ಪ್ರತಿಷ್ಠೆ ನೋಡಿ. ನೀವು ಪ್ರತಿಷ್ಠೆ ಮಾಡಿಕೊಳ್ಳುವುದು ಅವರೂ ಪ್ರತಿಷ್ಠೆ ಮಾಡಿಕೊಳ್ಳುವುದರಿಂದ ಮಕ್ಕಳ ಭವಿಷ್ಯ ಹಾಳಾಗುತ್ತಿದೆ.

ಅಧ್ಯಕ್ಷರು : ಉಭಯತರರು ಇದನ್ನು ಪ್ರತಿಷ್ಠೆಯ ಪ್ರಶ್ನೆಯನ್ನಾಗಿ ಮಾಡಿಕೊಳ್ಳುವುದು ಬೇಡ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೇ, 1995ನೇ ಇಸವಿಯಲ್ಲಿ ತಾವು ಮೂರು ತಿಂಗಳಲ್ಲಿ ಈ ಸಮಸ್ಯೆಗಳನ್ನು ಬಗೆಹರಿಸುತ್ತೇವೆಂದು ಹೇಳಿದಿರಿ. ಆದ್ದರಿಂದ ತಾವು ಈಗ ಪ್ರತಿಷ್ಠೆಯನ್ನು ಸ್ವಲ್ಪ ಕಡಿಮೆ ಮಾಡಿಕೊಂಡು ಮಾತುಕತೆಗೆ ಕರೆಯಿರಿ. ಮಕ್ಕಳ ಹಿತದೃಷ್ಟಿಯಿಂದ ಅವರನ್ನು ಮಾತುಕತೆಗೆ ಕರೆಯಿರಿ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ಯು.ಜಿ.ಸಿ. ವಿಚಾರ ಆಗಿರಬಹುದು ಅವರ ಬಡ್ತಿ ವಿಷಯಗಳು ಆಗಿರಬಹುದು, ವೇತನ ಮತ್ತು ಜೇಷ್ಠತೆಯ ಆಧಾರದ ವಿಷಯಗಳು ಆಗಿರಬಹುದು, ಸರ್ಕಾರ ಯಾವಾಗಲೂ ನ್ಯಾಯ ಸಮ್ಮತವಾಗಿರತಕ್ಕಂಥ ನಿರ್ಣಯ ತೆಗೆದುಕೊಳ್ಳುತ್ತದೆ. ಅವರ ಬಗ್ಗೆ ಗೌರವ ಇದೆ. ಅವರು ಸತ್ಯಾಗ್ರಹ ವಾಪಸ್ಸು ತೆಗೆದುಕೊಳ್ಳಲಿ ಈ ಸದನದ ಮೂಲಕ ನಾನು ಅವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಯು.ಕೆ.ಪಿ ಕೆಲಸ ಕಾರ್ಯಗಳು ಸ್ಥಗಿತಗೊಂಡಿರುವುದು

ಶ್ರೀ ಎಚ್.ಎನ್. ನಂಜೇಗೌಡ (ಬಸವನಗುಡಿ) : ಮಾನ್ಯ ಅಧ್ಯಕ್ಷರೇ, ನಮಗೆ ಒಂದು ಅನುಮಾನವಾಗಿದೆ. ಇದರಲ್ಲಿ ಏನಾದರೂ ಕಾನ್ಸಿಪಿರೆಸ್ಸಿ ಇದೆಯಾ ಅಂತ. ಕರ್ನಾಟಕದ ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಕೆಲಸ ನಿಂತು ಹೋಗಬೇಕು ಎನ್ನತಕ್ಕಂಥ ಆಂಧ್ರಪ್ರದೇಶಕ್ಕೆ

ಅನುಕೂಲವಾಗಬೇಕು ಎಂತ ಏನಾದರೂ ಒಂದು ಕಾನ್ಸ್ಪಿರೆಸಿ ಇದೆಯಾ ಅಂತ. 6 ತಿಂಗಳು ಆಯಿತು ಕೆಲಸ ನಿಲ್ಲಿಸಿ. ಮಾನ್ಯ ದೇವೇಗೌಡರಾದರೂ ಹೊಳೆಯಲ್ಲಿ ಬೀಳಲಿ ಜಾಲಪ್ಪನವರಾದರೂ ಹೊಳೆಯಲ್ಲಿ ಬೀಳಲಿ, ಅದಕ್ಕೂ ನಮಗೂ ಸಂಬಂಧ ಇಲ್ಲ. ನಮಗೆ ಕೆಲಸ ಆಗಬೇಕು. ಇಲ್ಲಿ ಏನಾಗುತ್ತಿದೆ. ಎಷ್ಟು ದಿನ ಆಯಿತು ಕೆಲಸ ನಿಲ್ಲಿಸಿ, ಏಕೆ ನಿಲ್ಲಿಸಿದ್ದೀರಿ? ನಿಮ್ಮ ವಿಚಾರಣೆ ಇದ್ದರೆ ಮಾಡಿಕೊಳ್ಳಿ. ಭ್ರಷ್ಟರು ಇದ್ದರೆ ಶಿಕ್ಷೆ ಮಾಡಿಕೊಳ್ಳಿ. ಭ್ರಷ್ಟರು ಇದ್ದರೆ ವಿಚಾರಣೆ ಮಾಡಿಕೊಳ್ಳಿ ಸಿಬಿಐ ತನಿಖೆ ಆಲ್ಲದಿದ್ದರೂ ಯಾವ ತನಿಖೆಯಾದರೂ ಮಾಡಿಕೊಳ್ಳಿ. ಕೆಲಸ ಏಕೆ ನಿಲ್ಲಬೇಕು? ನಾನು ಮಂತ್ರಿಯಾಗಿದ್ದಾ ಕಬಿನಿಯಲ್ಲಿ 26 ಜನರನ್ನು ಸಸ್ಪೆಂಡ್ ಮಾಡಿದ್ದೆ. ಫಾಲ್ಸ್ ಬಿಲ್ಸ್ ಕೊಟ್ಟಿದ್ದಾರೆಂದು ಕೆಲಸ ನಿಲ್ಲಿಸಲಿಲ್ಲ. ಅದು ಎಷ್ಟು ಆಗಿದೆ ಎಂದು ಅಳತೆ ಮಾಡಿಸಿ ಬಿಲ್ ಬಿಸಾಕಿ ಕೆಲಸ ಪ್ರಾರಂಭ ಮಾಡಿಸಿದೆವು. ನೀವು ಕೆಲಸವೇ ಮಾಡಿಸದೆ ಯಾವುದೋ ಒಂದು ನೆಪ ಸಿಕ್ಕಿದರೆ ಆಯಿತು ಒಂದು ವಿಚಾರಣೆಯಂತೆ ಮತ್ತೊಂದು ಅಂತೆ ಕೆಲವರು ಸಿಒಡಿ ವಿಚಾರಣೆ ಕೇಳುವುದು ಕೆಲವರು ಸಿ.ಬಿ.ಐ ವಿಚಾರಣೆಯನ್ನು ಕೇಳುವುದು, ಕಂಟ್ರಾಕ್ಟರ್‌ಗೆ ಬಿಲ್ ಕೊಡುವಂತೆ ಇಲ್ಲ. ಕೆಲಸ ನಿಲ್ಲಿಸುವುದು ಈಗ ಏನಾಗುತ್ತಿದೆ. ಯಾವಾಗ ಕೆಲಸ ನೀವು ಮುಗಿಸುತ್ತೀರಿ. ಯಾವ ದಿನಾಂಕದಿಂದ ನೀವು ಕೆಲಸ ಪ್ರಾರಂಭ ಮಾಡುತ್ತೀರಿ ಎನ್ನುವುದು ಈ ಸದನಕ್ಕೆ ತಾವು ತಿಳಿಸಬೇಕು. ಇದು ಮಕ್ಕಳಾಟವಲ್ಲ. ಈ ರಾಜ್ಯದ ಭವಿಷ್ಯತ್ತಿನ ಪ್ರಶ್ನೆ. ನನಗೆ ಗೊತ್ತಿದೆ ಏನಾಗುತ್ತದೆ ಎಂದು ಹೇಳಿ. ಈಗ ನೀವು unless you create the potential, ಡ್ಯಾಮ್ ಕಟ್ಟಿದರೆ ಆಗಲಿಲ್ಲ. ನಾಲೆಗಳು ಆಗಬೇಕು ಚಿಕ್ಕ ನಾಲೆಗಳು ಆಗಬೇಕು. ಇಲ್ಲದಿದ್ದರೆ ನಿಮ್ಮ ನೀರು ಉಪಯೋಗ ಆಯಿತು ಎಂದು ಯಾರೂ ಹೇಳುವುದಿಲ್ಲ. ಯಾವ ಟ್ರಿಬ್ಯೂನಲ್ ಒಪ್ಪುವುದಿಲ್ಲ. ಈಗ ಕೃಷ್ಣಾದಲ್ಲಿ ನಮಗೆ ಅನುಭವ ಆಗಿದೆ. ಅದ್ದರಿಂದ ನಾನು ಒತ್ತಾಯ ಮಾಡುತ್ತೇನೆ, ಸರ್ಕಾರ ಯಾವಾಗ ಪ್ರಾರಂಭ ಮಾಡುತ್ತದೆ? ಯಾವಾಗ ಮುಗಿಸುತ್ತಾರೆ ಎಂದು ಖಚಿತವಾದ ಉತ್ತರ ಕೊಡಬೇಕು. ಸುಮ್ಮನೆ ಹೇಳಿಕೊಂಡು ಹೋಗುತ್ತಿದ್ದಾರೆ. ನಾವೂ ಸಹ 6 ತಿಂಗಳಿಂದ ನೋಡುತ್ತಿದ್ದೇವೆ.

11.10 ಎ.ಎಂ

ನನಗೆ ಒಮ್ಮೊಮ್ಮೆ ಇಲ್ಲಿ ಆಂಧ್ರದ ಏಜಂಟರು ಇದ್ದಾರೋ ಎಂಬ ಅನುಮಾನ ಬರುತ್ತಾ ಇದೆ. ಇದರಿಂದ ನನಗೆ ಬಹಳ ಬೇಸರವಾಗಿದೆ. ಇದು ಬಹಳ ನೋವಿನ ಸಂಗತಿ. ಇದು ನಮ್ಮ ರಾಜ್ಯದ ಭವಿಷ್ಯದ ಪ್ರಶ್ನೆ. ನೀವು ಅಲ್ಲಿ ಯಾವಾಗ ಕೆಲಸವನ್ನು ಪ್ರಾರಂಭ ಮಾಡುತ್ತೀರಿ ಎಂಬುದನ್ನು ಹೇಳಬೇಕು.

ಶ್ರೀ ಬಿ.ಎಸ್. ಯುಡಿಯೂರಪ್ಪ (ಶಿಕಾರಿಪುರ) : ಮಾನ್ಯ ಅಧ್ಯಕ್ಷರೇ, ಇವರು ಕೃಷ್ಣ ಜಲಭಾಗ್ಯ ನಿಗಮ ಎಂದು ಜನರಿಂದ ಬಾಂಡ್‌ಗಳ ಮೂಲಕ ಹಣವನ್ನು ಸಂಗ್ರಹ ಮಾಡಿದ್ದಾರೆ. ಇದರ ಮೂಲಕ ನೂರಾರು ಕೋಟಿ ರೂ.ಗಳನ್ನು ಸಂಗ್ರಹ ಮಾಡಿದ್ದಾರೆ. ಕೊಟ್ಟ ಹಣಕ್ಕೆ ನೀವು ಅವರಿಗೆ ಬಡ್ಡಿಯನ್ನು ಕೊಡುತ್ತಾ ಇದ್ದೀರಿ? ಇದು ಯಾವ ಪುರುಷಾರ್ಥಕ್ಕೆ? ಸಾರ್ವಜನಿಕರ ಹಣಕ್ಕೆ ಬಾಂಡ್‌ಗಳ ಮೂಲಕ ಪಡೆದ ಹಣಕ್ಕೆ ಬಡ್ಡಿಕೊಟ್ಟು ಬಹಳ ವೀರಾವೇಶದಿಂದ ಮಾತನಾಡಿದ್ದೀರಿ. ಹೋದವರ್ಷದಲ್ಲಿ ನಾವು ಯಾರೂ ಮಾಡದ ಸಾಧನೆಯನ್ನು ಮಾಡಿದ್ದೇವೆ ಎಂದು ಹೇಳಿಕೊಂಡಿದ್ದೀರಿ. ಇದರ ಮೂಲಕ ನೀವು

ಸ್ವಲ್ಪ ಪ್ರಗತಿಯನ್ನು ಮಾಡಿದ್ದೀರಿ ಎಂದು ಅದಕ್ಕಿಂತಲೂ ಇನ್ನೂ ಮುಂದೆ ಹೋಗಿ ಎಂದು ನಾವು ಹೇಳಿದರೆ, ಈಗ ಕುಂಟುನೆಪಗಳನ್ನು ಹೇಳುತ್ತಾ ಇದ್ದೀರಿ. ಅಲ್ಲಿಗೆ ನೀವೂ ಕೂಡ ನಿನ್ನೆ ಹೋಗಿ ಬಂದ್ದೀರಿ, ನಾವೂ ಕೂಡ ಹಲವಾರು ಬಾರಿ ಹೋಗಿ ಬಂದಿದ್ದೇವೆ. ನೀವು ಕಳೆದ ಆರು ತಿಂಗಳುಗಳಿಂದ ಒಂದು ಇಂಚು ಹೆಜ್ಜೆಯನ್ನಾದರೂ ಮುಂದೆ ಇಟ್ಟಿದ್ದೀರೋ? ಅಲ್ಲಿ ಏನಾದರೂ ಕೆಲಸಗಳು ಆಗುತ್ತಾ ಇವೆಯೇ? ಆ ಸಮಿತಿ, ಈ ಸಮಿತಿ ಎಂದು ಎನ್‌ಕ್ವಾಯರಿಗಳನ್ನು ಮಾಡಿದ್ದೀರಲ್ಲಾ, ಅದು ಎಲ್ಲಿಗೆ ಬಂತು? ನೀವು ಏಕೆ ಈ ತರಹದ ಧೋರಣೆಯನ್ನು ಮಾಡುತ್ತಾ ಇದ್ದೀರಿ? 2000ನೇ ಇಸವಿಯೊಳಗಾಗಿ ನಮ್ಮ ಪಾಲಿನ ನೀರನ್ನು ಉಪಯೋಗಿಸಿಕೊಳ್ಳುತ್ತೇವೆ ಎಂದು ಜನರಿಗೆ ತೃಪ್ತಿಪಡಿಸುವ ಕೆಲಸವನ್ನು ಮಾಡುತ್ತಿದ್ದೀರೇ ಹೊರತು, ನಿಮ್ಮ ಆತ್ಮಸಾಕ್ಷಿಯಾಗಿ ಹೇಳುತ್ತೀರಾ? ಹೋದ ವರ್ಷದಲ್ಲಿ ನೀವು ಮಾಡಿದ ಪ್ರಗತಿ ಮತ್ತು ಈ ವರ್ಷದಲ್ಲಿ ಏನಾದರೂ ಪ್ರಗತಿ ಮಾಡಲು ಸಾಧ್ಯವಾಗಿದೆಯೇ? ಮಾನ್ಯ ನಂಜೇಗೌಡರು ಹೇಳಿದ ಹಾಗೆ ಒಂದು ರೀತಿಯಲ್ಲಿ ಏನಾದರೂ ಕಾನ್‌ಸ್ಪಿರೆಸಿ ಇದೆಯೇ? ಅಂದರೆ ಆಂಧ್ರದವರು ಆರಾಮವಾಗಿ ನೀರನ್ನು ಉಪಯೋಗಿಸಿಕೊಳ್ಳಲಿ, ಅವರು ನೆಮ್ಮದಿಯಿಂದ ಇರಲಿ, ಎಂದು ಹಿಂದೆ ಏನು ಆರೋಪಗಳು ಇದ್ದವು ಅವುಗಳನ್ನು ಈಗಲೂ ಮುಂದುವರೆಸಿಕೊಂಡು ಬರುತ್ತಿದ್ದೀರಾ? ಯಾರಾದರೂ ಅಲ್ಲಿ ಕೆಲಸ ಮಾಡದೇ ಮೋಸ ಮಾಡಿ ಬಿಲ್ ತೆಗೆದುಕೊಂಡಿದ್ದರೆ ಅವನನ್ನು ಬಲಿಹಾಕಿ. ಅಂಥವರನ್ನು ಬ್ಲಾಕ್‌ಲಿಸ್ಟ್‌ನಲ್ಲಿ ಸೇರಿಸಿ. ಆದರೆ ನೀವು ಕೆಲಸ ಮುಂದುವರಿಯಲು ಸರಿಯಾಗಿ ನೋಡಿ ಪ್ರೋಗ್ರೆಸ್ ಕಡೆಗೆ ಗಮನ ಕೊಡದಿದ್ದರೆ ನೀವು ರಾಜ್ಯದ ಜನರಿಗೆ ದ್ರೋಹ ಮಾಡಿದಂತೆ ಆಗುತ್ತದೆ. ಉತ್ತರ ಕರ್ನಾಟಕದ ಜನರು ನಿಮಗೆ ಈಗಾಗಲೇ ಶಾಪ ಹಾಕುತ್ತಿದ್ದಾರೆ. ಅವರು ನಿಮ್ಮನ್ನು ಕ್ಷಮಿಸುವುದಿಲ್ಲ. ದಯವಿಟ್ಟು ಸ್ಪಷ್ಟವಾದ ಉತ್ತರವನ್ನು ಕೊಡಿ. ನಮ್ಮ ಬಿಜಾಪುರ ಜಿಲ್ಲೆಯ ಶಾಸಕರು ಇಷ್ಟು ಹೊತ್ತು ನಮ್ಮ ಶಾಸಕಾಂಗ ಸಭೆಯಲ್ಲಿ ಚರ್ಚೆ ಮಾಡಿದ್ದಾರೆ. ಅವರು ಆ ಭಾಗದಲ್ಲಿ ಓಡಾಡಲು ನಮಗೆ ಕಷ್ಟವಾಗುತ್ತಿದೆ ಎಂದು ಹೇಳುವ ಸ್ಥಿತಿಗೆ ಬಂದಿದೆ. ನೀವು ದಯಮಾಡಿ ಕೆಲಸವನ್ನು ಪ್ರಾರಂಭಿಸಿ. ಎನ್‌ಕ್ವಾಯರಿ ಮುಂತಾಗಿ ಮಾಡಿ ಯಾರ ಮೇಲೆ ಕ್ರಮ ತೆಗೆದುಕೊಳ್ಳಬೇಕೋ ತೆಗೆದುಕೊಳ್ಳಿ. ಮೊದಲು ಕೆಲಸವನ್ನು ಶುರು ಮಾಡಿ. ಕೆಲಸ ಮಾತ್ರ ನಾಳೆಯಿಂದ ಪ್ರಾರಂಭ ಆಗಬೇಕು.

ಶ್ರೀ ಬಸವನಗೌಡ ಪಾಟೀಲ್. ಯತ್ನಾಳ (ಬಿಜಾಪುರ) : ಮಾನ್ಯ ಅಧ್ಯಕ್ಷರೇ, ಇವರು ತಮ್ಮ ತಮ್ಮ ರಾಜಕೀಯಕ್ಕಾಗಿ ಯುಕೆಪಿ ಯನ್ನು ಬಲಿಪಶುವಾಗಿ ಮಾಡುತ್ತಿದ್ದಾರೆ. ಯಾರೋ ಇಬ್ಬರು ರಾಜಕೀಯ ನಾಯಕರ ತೀಟೆ ತೀರಿಸಲು ಇಡೀ ಯುಕೆಪಿಯ ಕೆಲಸ ಸಂಪೂರ್ಣವಾಗಿ ಸ್ಥಗಿತವಾಗಿದೆ. ಕೋಟ್ಯಾಂತರ ರೂಪಾಯಿಗಳ ಹಣವು ಅದರಲ್ಲಿ ಗುಳುಂ ಆಗಿದೆ ಎಂಬ ಆಪಾದನೆಯನ್ನು ಮಾಡಿಕೊಂಡು ಕೆಲಸ ನಿಲ್ಲಿಸಿದ್ದಾರೆ. ಆರು ತಿಂಗಳುಗಳಿಂದ ಒಂದು ಕೆಲಸವೂ ಅಲ್ಲಿ ಆಗುತ್ತಾ ಇಲ್ಲ. ಯುಕೆಪಿಯ ಸಂಪೂರ್ಣ ಕೆಲಸವು ಸ್ಥಗಿತವಾಗಿದೆ. ಪತ್ರಿಕೆಗಳನ್ನು ತೆಗೆದುಕೊಂಡು ನೋಡಿದರೆ ಕೇವಲ ಆರೋಪ, ಪ್ರತ್ಯಾರೋಪಗಳು ಮಾತ್ರ ಕಾಣಿಸಿಗುತ್ತವೆ. 40 ವರ್ಷಗಳಿಂದ ರಾಜ್ಯವನ್ನು ಆಡಳಿತ ಮಾಡಿದಂಥ ಸರಕಾರವು, 1964ರಿಂದ ಒಂದು ಯೋಜನೆಯು ಪ್ರಾರಂಭವಾದ ನಂತರ ಇಲ್ಲಿಯ ತನಕ ಏನು ಮಾಡಿದ್ದಾರೆ ಎಂಬುದನ್ನು ಜನರ ಮುಂದೆ ಇಡಬೇಕಾಗಿದೆ. ಅದನ್ನು ಬಿಟ್ಟು ಈಗ

ಕೆಲಸವನ್ನು ಸ್ಥಗಿತ ಮಾಡಿದ್ದನ್ನು ಪ್ರಾರಂಭಿಸಲು ಗಂಭೀರವಾಗಿ ಕ್ರಮ ತೆಗೆದುಕೊಳ್ಳಬೇಕು. ಯಾವುದೇ ಆರೋಪಗಳು ಬಂದರೂ ಅದರ ಬಗ್ಗೆ ತನಿಖೆ ಮಾಡಲಿ. ಅದನ್ನು ಬಿಟ್ಟು ಕೆಲಸವನ್ನು ಸ್ಥಗಿತ ಮಾಡಿದರೆ ನಮ್ಮ ಉತ್ತರ ಕರ್ನಾಟಕಕ್ಕೆ ಅನ್ಯಾಯ ಮಾಡಿದಂತಾಗುತ್ತದೆ. ಇದನ್ನು ಸಚಿವರು ತಿಳಿದುಕೊಳ್ಳಬೇಕು. ಅವರು ನಮಗೆ ಅನೇಕ ವಿಚಾರಗಳಲ್ಲಿ ತುಂಬಾ ತೆರೆದ ಮನಸ್ಸಿನಿಂದ ಸಹಾಯ ಮಾಡಿದ್ದಾರೆ. ರೈತರ ವಿಚಾರ ಬಂದಾಗ ಅದಕ್ಕಾಗಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈ ನೀರಾವರಿ ಸೌಲಭ್ಯವನ್ನು ಒದಗಿಸಲು ಕ್ರಮ ಕೈಗೊಂಡ ಸರಕಾರವು ಇದರಲ್ಲಿ ಯಾವುದೇ ರಾಜಕೀಯವನ್ನು ಮಾಡದೆ ಯಾವ ರಾಜಕೀಯ ತೀಟೆಗಾಗಿಯೋ ಕೃಷ್ಣಾ ನೀರಾವರಿ ಯೋಜನೆಯನ್ನು 2000ದೊಳಗೆ ಮುಗಿಯದೇ ಇರುವಂತೆ ಮಾಡುವ ರಾಜಕೀಯ ಸಂಚನ್ನು ಮಾಡುತ್ತಿದ್ದಾರೋ ಎಂದು ಅನುಮಾನ ಬರುತ್ತದೆ. ಅಂಥವರು ಆಂಧ್ರದ ಪರವಾಗಿ ಅಲ್ಲಿನ ಗುತ್ತಿಗೆದಾರರ ಪರವಾಗಿ ಕೆಲಸ ಮಾಡುತ್ತಿರುವುದನ್ನು ಉತ್ತರ ಕರ್ನಾಟಕ ಜನರು ದೌರ್ಭಾಗ್ಯದಿಂದ ನೋಡಬೇಕಾಗಿದೆ. ಯಾವ ಎನ್‌ಕ್ವಾಯರಿಯನ್ನು ಸರಕಾರದವರು ಮಾಡಿದರೂ ಕೂಡ ಯಾವುದೇ ಪರಿಸ್ಥಿತಿಯಲ್ಲಿಯೂ ಕೆಲಸ ಮಾತ್ರ ಸ್ಥಗಿತವಾಗಬಾರದು. ಯುದ್ಧೋಪಾದಿಯಲ್ಲಿ ಕೆಲಸ ಮುಗಿಯಬೇಕು. 2000ನೇ ಇಸವಿಯೊಳಗಾಗಿ ಸಂಪೂರ್ಣವಾಗಿ 734 ಟಿಎಂಸಿ ನೀರನ್ನು ಉಪಯೋಗಿಸಲು ಸರಕಾರವು ಗಂಭೀರವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಅತ್ಯಂತ ಕಳಕಳಿಯಿಂದ ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ (ನೀರಾವರಿ ಸಚಿವರು) : ಮಾನ್ಯ ಅಧ್ಯಕ್ಷರೇ, ಮಾನ್ಯ ಹಿರಿಯ ಸದಸ್ಯರಾದ ನಂಜೇಗೌಡರು, ಯಡಿಯೂರಪ್ಪನವರು, ಬಸವನಗೌಡ ಪಾಟೀಲರು ಮಾತನಾಡುತ್ತಾ, ಅಲ್ಲಿರತಕ್ಕಂಥ ಗುತ್ತಿಗೆದಾರರಿಗೆ ನೀವು ಸರಿಯಾಗಿ ಹಣವನ್ನು ಪಾವತಿ ಮಾಡುತ್ತಾ ಇಲ್ಲ, ಯಾವುದೋ ತನಿಖೆಗಳನ್ನು ಮಾಡುತ್ತಿದ್ದೇವೆ ಎಂದು ಹೇಳುತ್ತಾ ರಾಜಕೀಯ ಆರೋಪಗಳನ್ನು ಹೇಳುತ್ತಾ ಕಾನ್‌ಸ್ಪಿರೆಸಿ ಎಂಬ ಪದವನ್ನು ಬಳಸಿದ್ದಾರೆ. ಆಂಧ್ರದವರಿಗೆ ಸಹಾಯ ಮಾಡುವ ಸಲುವಾಗಿ ಕಾನ್‌ಸ್ಪಿರೆಸಿ ಮಾಡಿ ಕೆಲಸವನ್ನು ನಿಲ್ಲಿಸಿದ್ದಾರೆ ಎಂಬ ಮಾತನ್ನು ಹೇಳಿದ್ದಾರೆ. 2000ನೇ ಇಸವಿಯೊಳಗಾಗಿ ಈ ಯೋಜನೆಯ ಕೆಲಸವನ್ನು ಮುಗಿಸಬೇಕು ಎಂದು ಹೇಳಿದ್ದಾರೆ. ಮಾನ್ಯ ಅಧ್ಯಕ್ಷರು ನನಗೆ ಕಾಲಾವಕಾಶವನ್ನು ಕೊಟ್ಟರೆ ಒಂದರೆಡು ನಿಮಿಷಗಳಲ್ಲಿ ಉತ್ತರಿಸುತ್ತೇನೆ. ಒಂದನೆಯದು ನಮಗೆ ಇವೊತ್ತು ಇರತಕ್ಕಂಥ ಕ್ರಿಟಿಕಲ್ ಕಾಂಪೊನೆಂಟ್ಸ್ ಏನಿದ್ದಾವೆ, ಡ್ಯಾಂ ಆಗಲಿ, ಕೆನಾಲ್ ಆಗಲೀ, ಡಿಸ್ಟ್ರಿಬ್ಯೂಟರೀಸ್ ಆಗಲಿ, ಇವು ಯಾವುದೇ ವಿಚಾರದಲ್ಲಿ ನಾವು ಕೆಲಸವನ್ನು ಮಾತ್ರ ನಿಲ್ಲಿಸಿಲ್ಲ ಕೆಲಸವನ್ನು ಮಾಡಿಸುತ್ತಾ ಇದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವು ಸುಮ್ಮನೆ ಹೇಳುತ್ತಿದ್ದೀರಿ. ನಿಮ್ಮ ಕೆಲಸವನ್ನು ನೋಡಿಕೊಂಡು ಬರಲು ಸದನ ಸಮಿತಿಯನ್ನು ಕಳುಹಿಸಿಕೊಡಿ. ಸುಮ್ಮನೆ ಪ್ರತೀ ಸಾರಿಯೂ ಹೀಗೆ ಹೇಳಿಕೊಂಡು ಬರುವುದು, ನಿಮ್ಮದ್ದೆಲ್ಲವನ್ನೂ ಮುಚ್ಚಿಟ್ಟುಕೊಂಡು ಅಲ್ಲಿ ಕೆಲಸ ನಡೆಯುತ್ತಿದೆ ಎಂದು ಕಥೆ ಹೇಳಿಕೊಂಡು ಅದನ್ನು ಪತ್ರಿಕೆಗಳಿಗೆ ಹೇಳಿ ಅದರಿಂದ ಪ್ರಚಾರ ತೆಗೆದುಕೊಂಡು ಖುಷಿ ಪಡುವುದಾದರೆ ಪಟ್ಟುಕೊಳ್ಳಿ.

ಶ್ರೀ ಕೆ.ಎನ್. ನಾಗೇಗೌಡ : ನಮಗೆ ಪ್ರಚಾರದ ಹುಚ್ಚು ಇಲ್ಲ. ದಯವಿಟ್ಟು ಕೇಳಿ 528ರ ಅಡಿಯ ಕಾಂಕ್ರಿಟ್‌ನ ಮೇಲೆ ನಾನು ನಿನ್ನೆಯ ದಿನ ನಿಂತು ಬಂದಿದ್ದೇನೆ. 528ರ ಡ್ಯಾಂನ ಮೇಲೆ ಸುಮಾರು 150 ಅಡಿಗಳಷ್ಟು ಕಾಂಕ್ರಿಟ್ ಹಾಕಿರತಕ್ಕಂಥಾದ್ದು ಇದೆ.

ಶ್ರೀ ಹೆಚ್. ಎನ್. ನಂಜೇಗೌಡ : ಮಾನ್ಯ ಅಧ್ಯಕ್ಷರೇ.....

ಶ್ರೀ ಸಿ. ಭೈರೇಗೌಡ : ಸಚಿವರು ಉತ್ತರ ಕೊಡಲು ಅವಕಾಶ ಕೊಡುವುದು ಬೇಡವೇ?

ಅಧ್ಯಕ್ಷರು : ಅಲ್ಲಿ ಎಷ್ಟು ದಿವಸಗಳಿಂದ ಕೆಲಸ ನಿಂತಿದೆ ಎಂದು ಸದಸ್ಯರು ಕೇಳುತ್ತಿದ್ದಾರೆ. ಕಳೆದ ತಿಂಗಳು ನಾನು ಅಲ್ಲಿಯೇ ಇದ್ದೆ.

ಶ್ರೀ ಹೆಚ್.ಎನ್. ನಂಜೇಗೌಡ : ನಾನು ಡ್ಯಾಂ ವರ್ಕ್ ಬಗ್ಗೆ ಹೇಳುತ್ತಾ ಇಲ್ಲ.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೇ, ತಾವುಗಳು ಅಲ್ಲಿ ಮೂರು ದಿನಗಳ ಆಲಮಟ್ಟಿಯಲ್ಲಿ ಇದ್ದು ಅಲ್ಲಿನ ಕೆಲಸಗಳನ್ನು ನೋಡಿ ಬಂದಿದ್ದೀರಿ ಎಂದು ನಮ್ಮ ಅಧಿಕಾರಿಗಳು ತಿಳಿಸಿದ್ದಾರೆ. ಅಲ್ಲಿ ತಾವುಗಳು ಕುಳಿತುಕೊಂಡು ಅಲ್ಲಿನ ಎಲ್ಲಾ ವಿಚಾರಗಳನ್ನು ಬಹಳ ವಿಸ್ತಾರವಾಗಿ ಪರಿಶೀಲಿಸಿಕೊಂಡು ಬಂದಿದ್ದೀರಿ ಎಂಬ ಬಗ್ಗೆಯೂ ಅಧಿಕಾರಿಗಳು ಹೇಳಿದ್ದಾರೆ. ತಮಗೂ ವಾಸ್ತವಾಂಶ ಗೊತ್ತಿದೆ. ಮಾನ್ಯ ಯಡಿಯೂರಪ್ಪನವರು ಮತ್ತು ಮಾನ್ಯ ನಂಜೇಗೌಡರು ಉತ್ತರವನ್ನು ಸ್ವಲ್ಪ ಸಮಾಧಾನವಾಗಿ ಕೇಳಿದರೆ ನಾನು ಉತ್ತರ ಕೊಡುತ್ತೇನೆ. ಅಲ್ಲಿ ಕೆಲಸ ನಿಂತು ಬಿಟ್ಟಿದೆ ಎಂದು ಹೇಳಿದರೆ ಅದನ್ನು ಸರಕಾರ ಒಪ್ಪಿಕೊಳ್ಳಲು ತಯಾರಾಗಿಲ್ಲ. ಅಲ್ಲಿ ಯಾವ ಹಂತದಲ್ಲಿ ಏನಾಗಿದೆ ಎಂಬುದನ್ನು ಈ ಸದನದಲ್ಲಿ ನಾನು ಬಿಚ್ಚು ಮನಸ್ಸಿನಿಂದ ಹೇಳುತ್ತೇನೆ. ಆ ಮೇಲೆ ತಾವುಗಳು ಕೆಲಸ ನಿಂತು ಹೋಗಿದೆಯೋ ಇಲ್ಲವೋ ಎಂಬುದನ್ನು ತೀರ್ಮಾನ ಮಾಡಬಹುದು. ಇರತಕ್ಕಂಥಾದ್ದು ಡ್ಯಾಂ ಪೋರ್ಷನ್. ನಂಜೇಗೌಡರು ಹೇಳಿದ ಹಾಗೆ ಸ್ಟೋರೇಜ್ ಮಾಡಿಕೊಂಡರೆ ಯುಟಿಲೈಸೇಷನ್ ಮಾಡಿಕೊಂಡ ಹಾಗೆ ಅಲ್ಲ. ಬಚಾವತ್ ಅವಾರ್ಡ್‌ನಲ್ಲಿ ಯುಟಿಲೈಸೇಷನ್ ಎಂಬ ಪಾಯಿಂಟ್ ಇದೆ ಎಂಬ ಮಾತನ್ನು ಹೇಳಿದ್ದಾರೆ. ಯುಟಿಲೈಸೇಷನ್ ಮಾಡಿಕೊಳ್ಳಲು ಸಿಸ್ಟಂ ಕ್ರಿಯೇಟ್ ಮಾಡಿಕೊಳ್ಳ ಬೇಕೆಂಬುದೇ ನಮ್ಮ ಇಚ್ಛೆ. ಮೊದಲು ಸ್ಟೋರೇಜ್ ಆ ಮೇಲೆ ಯುಟಿಲೈಸೇಷನ್. ಸ್ಟೋರೇಜ್ ಕುರಿತಾಗಿ ಹೇಳುವುದಾದರೆ ಇನ್ನು ಮೂರು ತಿಂಗಳೊಳಗೆ ಸಿವಿಲ್ ವರ್ಕ್ಸ್ ಡ್ಯಾಂನಲ್ಲಿ ಮುಗಿದು ಹೋಗುತ್ತದೆ. ತಾವುಗಳೂ ಕೂಡ ಹೋಗಿ ಬಂದವರಿದ್ದೀರಿ. ಅಂದರೆ ಸೆಪ್ಟಂಬರ್ ತಿಂಗಳಲ್ಲಿ ಸಿವಿಲ್ ವರ್ಕ್ಸ್ ಇರುವುದಿಲ್ಲ. ಸೆಪ್ಟಂಬರ್ ನಿಂದ 26 ಗೇಟ್‌ಗಳನ್ನು ಜೂನ್‌ವರೆಗೆ ಹಾಕಿಸುತ್ತೇವೆ. ಹಾಗಾಗಿ ಡ್ಯಾಂನಲ್ಲಿ ನೀರು ಇಟ್ಟುಕೊಳ್ಳತಕ್ಕಂಥಾದ್ದು ಮುಗಿದು ಹೋಯಿತು. ಸೆಪ್ಟಂಬರ್‌ಗೆ ಸಿವಿಲ್‌ವರ್ಕ್ಸ್ ಇರುವುದಿಲ್ಲ. ಒಂದೂವರೆ ವರ್ಷದಲ್ಲಿ ಸುಮಾರು 100 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಡ್ಯಾಂವರ್ಕ್ಸ್‌ನ್ನು ಮುಗಿಸಿದ್ದೇವೆ. ಇನ್ನೂ 50 ಕೋಟಿ ರೂ. ಡ್ಯಾಂಗೆ ಖರ್ಚು ಮಾಡಬೇಕಾಗುತ್ತದೆ. ಅದಕ್ಕಾಗಿ ಈ ವರ್ಷದ ಬಜೆಟ್‌ನಲ್ಲಿ 40 ಕೋಟಿ ರೂ.ಗಳನ್ನು ಇಡಲಾಗಿದೆ. ಹಾಗಾಗಿ ಹಣದ ತೊಂದರೆ ಇಲ್ಲ, ಡ್ಯಾಂನ ಕೆಲಸವೂ ಮುಗಿಯುತ್ತದೆ. ಗೇಟ್ ಹಾಕಿಸುತ್ತೇವೆ, ಎರಡು ಅಪ್ರೋಚಸ್

ಮಾಡಿದ್ದೇವೆ, ಮಾನ್‌ಸೂನ್ ಹೊತ್ತಿಗೆ ಅಲ್ಲಿ ಸ್ಪೋರೇಜ್ ಮಾಡುವುದಕ್ಕೆ ಆನ್ ಫ್ರೋಗ್ರಾಮ್ ಎಲ್ಲಾ ಕೆಲಸಗಳನ್ನು ಮಾಡಿದ್ದೇವೆ. ಒಂದು ದಿನವನ್ನೂ ಕೂಡ ವ್ಯರ್ಥ ಮಾಡಿಲ್ಲ. ಗ್ಯಾಮನ್ ಆಫ್ ಇಂಡಿಯಾದವರು ಮತ್ತು ನಮ್ಮ ಇಂಜಿನೀಯರ್ಸ್‌ಗಳು ಸತತವಾಗಿ ಕೆಲಸ ಮಾಡುತ್ತಿದ್ದಾರೆ. ಅಲ್ಲಿ ಬಿಸಿಲು ಇರುವುದರಿಂದ ದಿವಸದಲ್ಲಿ ಕಾಂಕ್ರೀಟ್ ಹಾಕಲು ಆಗುವುದಿಲ್ಲ. ಹಾಗಾಗಿ ರಾತ್ರಿಯಲ್ಲಿ ಕಾಂಕ್ರೀಟ್ ಹಾಕಿ ಸ್ಟ್ರೆಂಗ್ತ್ ಮತ್ತು ಹಾರ್ಡ್‌ನೆಸ್ ಬರಲಿ ಎಂದು ಹಾಕುತ್ತಿದ್ದಾರೆ. ಹಾಗಾಗಿ ಡ್ಯಾಂಪೋರ್ಷನ್ ಕೆಲಸ ನಿಂತಿಲ್ಲ. ನಾನು ನಿನ್ನೆ ಬೆಳಿಗ್ಗೆ ಅಲ್ಲಿಂದ ಬಂದಿದ್ದೇನೆ. Coming back to three main canals, one is J.B.C and that the next is M.R.B.C and third is Indi Canal.

ಇಷ್ಟೂ ಕೆನಾಲ್‌ಗಳಲ್ಲಿ400 ಕ್ಕಿಂತಲೂ ಹೆಚ್ಚು ಕಿ.ಮೀ.ಗಳಲ್ಲಿ 80 ಕಿ.ಮೀ ಮಾತ್ರ ಅರ್ಥ್‌ವರ್ಕ್ ಇರುವುದು. ಅದಕ್ಕಾಗಿ ಮೊದಲು ಜೀರೋ ದಿಂದ 40ರ ವರೆಗೆ ಡಿಸ್ಟ್ರಿಬ್ಯೂಟರಿ ಮಾಡಬೇಕು. ಡಿಸ್ಟ್ರಿಬ್ಯೂಟರಿ ಆದ ಮೇಲೆ ಫೀಲ್ಡ್ ಕ್ಯಾನಾಲ್ ಮಾಡಬೇಕು. ಒಟ್ಟಿನಲ್ಲಿ ಇಲ್ಲಿ ಆಗಿರತಕ್ಕಂಥ ಒಂದೇ ಒಂದು ತಾಪತ್ರಯ ಅಂದರೆ, ಎನ್‌ಆರ್‌ವಿಸಿ ಯಲ್ಲಿ ಈ ಒಂದು ವ್ಯಾಜ್ಯ ಬಂದಾಗ, ತಕರಾರುಗಳು, ಸಮಿತಿಗಳು ಮುಂತಾಗಿ ಆರೋಪಗಳನ್ನು ಮಾಡಿದಾಗ ನಾವು ಒಂದೂವರೆ ವರ್ಷದಿಂದ ಮೂರು ಕಮಿಟಿಗಳ ಕಡೆಯಿಂದ ತನಿಖೆ ಮಾಡಿಸಿದ್ದೇವೆ. ಮಾನ್ಯ ಕೆ.ಸಿ. ರೆಡ್ಡಿಯವರು ಹೋಗಿ ಬಂದು ತನಿಖೆ ಮಾಡಿ ರಿಪೋರ್ಟ್ ಕೊಟ್ಟಿದ್ದಾರೆ. ಎರಡನೇ ಕಮಿಟಿಯಲ್ಲಿ ನಮ್ಮ ಉಮೇಶ್ ರಾವ್‌ರವರು ಇದ್ದಾರೆ. ಮೂರನೇ ಕಮಿಟಿಯಲ್ಲಿ ನಮ್ಮ ಅಡಿಶನಲ್ ಸೆಕ್ರೆಟರಿ ಮುತ್ತಣ್ಣನವರನ್ನು ಕಳುಹಿಸಿ ತನಿಖೆ ಮಾಡಿಸಿದ್ದೇವೆ. ಕೃಷ್ಣಾ ಜಲಭಾಗ್ಯ ನಿಗಮದ ಬೋರ್ಡ್‌ನಲ್ಲಿ ವರದಿಗಳನ್ನು ಇಟ್ಟು ಪೂರ್ಣವಾಗಿ ಪರಿಶೀಲನೆ ಮಾಡಿಸಿದ್ದೇವೆ. ಸಚಿವಸಂಪುಟದಲ್ಲಿ ಕೂಡ ಈ ಕುರಿತು ತೀರ್ಮಾನ ಮಾಡಿದ್ದೇವೆ. ಇನ್ನು 15 ದಿವಸಗಳಲ್ಲಿ ಅಲ್ಲಿರತಕ್ಕಂಥ ಎಲ್ಲಾ ಕಂಟ್ರಾಕ್ಟರ್ಸ್‌ಗೆ ಏನು ತೀರ್ಮಾನವಾಗಿದೆ, ಅದರಂತೆ ನಾವು ಪೇಮೆಂಟ್ ಮಾಡುತ್ತೇವೆ. ಅಂತೆಯೇ ಅಲ್ಲಿ ಯಾವ ತನಿಖೆಯ ಅವಶ್ಯವೂ ಇಲ್ಲ. ಕೆಲಸ ಮಾಡುತ್ತಿರುವುದಕ್ಕೆ ನಾವು ತನಿಖೆ ಮಾಡಿಸಬೇಕೇ? 2000 ಕೋಟಿ ಕೆಲಸವನ್ನು ಮೂರು ವರ್ಷಗಳಲ್ಲಿ ಮಾಡುವುದಕ್ಕೆ ನಾವು ತನಿಖೆ ಮಾಡಬೇಕಾ? ಆದ್ದರಿಂದ ತನಿಖೆ ಅವಶ್ಯಕತೆ ಇಲ್ಲ, ಕೆಲಸ ಶುರು ಮಾಡಿಸುತ್ತೇವೆ. ಪೇಮೆಂಟೂ ಕೊಡುತ್ತೇವೆ.

ಬಿಜಾಪುರಕ್ಕೆ ಕುಡಿಯುವ ನೀರಿನ ತೊಂದರೆ

ಶ್ರೀ ಬಸವನಗೌಡ ರಾ. ಪಾಟೀಲ್ (ಬಿಜಾಪುರ) : ಅಧ್ಯಕ್ಷರೇ, ಬಿಜಾಪುರಕ್ಕೆ ಇನ್ನೊಂದು ವಾರದಲ್ಲಿ ಕೊಯ್ನಾ ನೀರು ಬಿಡುಗಡೆ ಆಗದಿದ್ದರೆ ಇರುವ ನೀರು ಎರಡುಮೂರು ದಿವಸದಲ್ಲಿ ಆಗಿಹೋಗುವಂತಹ ಭೀಕರ ಪರಿಸ್ಥಿತಿ ನಿರ್ಮಾಣವಾಗಿದೆ. ಬಹುಶಃ ಕೃಷ್ಣ ನದಿಯಲ್ಲಿ ನೀರಿಲ್ಲ, ಅದರ ವ್ಯಾಪ್ತಿಗೆ ಬರುವ ಪಟ್ಟಣ ಹಳ್ಳಿಗಳಿಗೂ ನೀರಿಲ್ಲ, ಕನಿಷ್ಟ ಎರಡು ಟಿಎಂಸಿ ಆದರೂ ಬಿಡಬೇಕು ಆದರೆ ನಮ್ಮ ಸರ್ಕಾರ ಈ ಸಂಬಂಧ ಕೋಟ್ಯಾಂತರ ರೂಗಳನ್ನು ಮಹಾರಾಷ್ಟ್ರಕ್ಕೆ ಕೊಡದಿರುವುದರಿಂದ ನೀರು ಬಿಡುವುದಿಲ್ಲವೆಂದು ಸ್ಪಷ್ಟವಾಗಿ ತಿಳಿಸಿದ್ದಾರೆಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ನೀರಾವರಿ ಸಚಿವರಲ್ಲಿ